ಶುರುವಾಗಿತ್ತು. ಅವಳ ಹಠಕ್ಕೆ ರೋಸಿ ಹೋಗಿದ್ದರು ಸುಗುಣ ಮತ್ತು ರೇವಂತಪ್ಪ. ನಿನಗಿನ್ನೂ ಹದಿನೆಂಟಾಗಿಲ್ಲ, ಆದ ಮೇಲೆ ತೆಗಿಸಿಕೊಡುತ್ತೇವೆ ಬಿಡು ಅಂತ ಎಷ್ಟು ಹೇಳಿದರೂ ಕೇಳುತ್ತಿಲ್ಲ. ಆಗಾ ಅಲ್ಲಿಯೇ ಇದ್ದ ಸಿದ್ದು 'ಲೈಸೆನ್ಸ್ ಇಲ್ಲದೆ ಗಾಡಿ ಓಡಿಸಬಾರದು, ಆಮೇಲೆ ತಗೊವಂತೆ ಬಿಡವ್ವ' ಎಂದ.

ಮೊದಲೇ ಕುದಿಯುತ್ತಿದ್ದ ನಿಧಿ ಸಿದ್ದುನ ಮಾತು ಕೇಳಿ ಕೆರಳಿ ಕೆಂಡವಾದಳು. ರೋಷದಿಂದ ಸಿಡಿಯುತ್ತ 'ನಿನ್ನನ್ಯಾರು ಕರೆಸಿದ್ದು, ಬಾಯಿ ಮುಚ್ಚಿಕೊಂಡು ಇರು. ಆಳು ಆಳಿನಂತೆ ಇರಬೇಕು. ಮನೆ ವಿಷಯದಲ್ಲಿ ಯಾಕೆ ತಲೆ ಹಾಕ್ತಿಯಾ, ನಿಂದು ಎಷ್ಟು ಇದೆಯೊ ಅಷ್ಟು ನೋಡಿಕೊಂಡು ಹೋಗು ಅಧಿಕ ಪ್ರಸಂಗಿ' ಎಂದು ಬಿಟ್ಟಳು.

ಅಲ್ಲೇ ಇದ್ದ ಸುಗುಣ 'ಮುಚ್ಚೆ ಬಾಯಿ' ಅಂತ ಹೊಡೆಯಲು ಕೈ ಎತ್ತಿದಾಗ ಅವಳನ್ನು ತಡೆದ ರೇವಂತಪ್ಪ 'ಸುಮ್ಮನಿರು ಸುಗುಣ, ಕೈ ಮಾಡ ಬೇಡ, ಅವಳು ಎಷ್ಟು ಹಾರಾಡಿದರೂ ಅಷ್ಟೇ, ಹದಿನೆಂಟು ಆಗುವ ತನಕ ಗಾಡಿ ಕೊಡಿಸುವುದಿಲ್ಲ, ಸುಮ್ಮನಿದ್ದು ಬಿಡು, ಅವಳನ್ನು ಕೆಣಕ ಬೇಡ' ಎಂದು ಹೆಂಡತಿಯನ್ನು ಸುಮ್ಮನಾಗಿಸಿದರು. ತನ್ನ ಕೋರಿಕೆ ಈಡೇರುವುದಿಲ್ಲ ಅಂತ ಗೊತ್ತಾದ ಮೇಲೆ ಅಳುತ್ತಲೆ ನಿಧಿ ಅಲ್ಲಿಂದ ಸಿಡಾರನೇ ಎದ್ದು ಹೋದಳು.

'ಇವಳ್ಯಾಕೆ ಇಂಗೆ ಆಡ್ತಾಳೆ, ನಮ್ಮನ್ನ ಯಾಕೆ ಅರ್ಥ ಮಾಡಿಕೊಳ್ಳುತ್ತಿಲ್ಲ, ಅವಳೂ ನೋಯ್ತಾಳೆ ನಮ್ಮನ್ನೂ ನೋಯಿಸುತ್ತಾಳೆ' ಸುಗುಣ ಅತ್ತೇ ಬಿಟ್ಟಳು.

'ಇತಿಹಾಸ ಮರುಕಳಿಸುತ್ತಾ ಇದೆಯೇನೊ' ಸಿದ್ದುವಿನ ಬಾಯಿಂದ ಹೊರಬಿದ್ದ ಮಾತಿನಿಂದ ಸುಗುಣ ಚಕಿತಳಾಗಿ ಸರ್ರನೆ ಅವನತ್ತ ನೋಡಿದಳು. ಆ ಮಾತನ್ನು ಆಡಿಯೇ ಇಲ್ಲವೇನೊ ಎಂಬಂತೆ ಹರಿದ ಕಾಫಿ ಚೀಲಕ್ಕೆ ಹೊಲಿಗೆ ಹಾಕುತ್ತಿದ್ದ. ತಾನು ಕೇಳಿದ್ದು ನಿಜವೋ ಅಥವಾ ತನ್ನ ಭ್ರಮೆಯೋ ಗೊಂದಲಕ್ಕೊಳಗಾದಳು. ರೇವಂತಪ್ಪನೂ ಮತ್ತೇನೊ ಕೆಲಸದಲ್ಲಿ ಮುಳುಗಿ ಹೋಗಿದ್ದ. ಹಾಗಾದರೆ ಸಿದ್ದು ಹೇಳಿದ್ದು, ತಾನು ಕೇಳಿದ್ದು ಇನ್ನ ಭ್ರಮೆಯೆ ಇರಬೇಕು ಅಂದುಕೊಳ್ಳುವಷ್ಟರಲ್ಲಿ ಸಿದ್ದು ಕಸಿವಿಸಿಯಿಂದ ಅವಳ ಮುಖ ನೋಡಿದ್ದ. ತಟ್ಟನೆ ಕುಸಿದು ಹೋದಳು.

ನಿಧಿಯ ಗಾಡಿ ಕನಸು ಸದ್ಯಕ್ಕೆ ಮುರುಟಿ ಹೋಗಿತ್ತು. ತನ್ನಾಸೆಗೆ ಯಾರೂ ಸಪೋರ್ಟ್ ಮಾಡಲಿಲ್ಲ ಅನ್ನೋ ಕೊರಗಿನಿಂದಲೇ ಇದ್ದಳು. ಜುಮ್ಮಂತ ಗೆಳತಿಯರ ಮುಂದೆ ಹೋಗಬೇಕು ಅನ್ನೋ ಆಸೆಯನ್ನು ತನ್ನ ಹದಿನೆಂಟನೆ ಹುಟ್ಟುಹಬ್ಬದ ತನಕ ಕಾಯಲೇ ಬೇಕು. ಅಪ್ಪ ಹೇಗೊ ಮನಸ್ಸು ಮಾಡುತ್ತಿದ್ದರೇನೊ, ಆ ಹಾಳು ಸಿದ್ದ ಗೊದ್ದ ಅಪಶಕುನದಂತೆ ನುಡಿದು ಬಿಟ್ಟ, ಇಲ್ಲದಿದ್ದರೇ ಅಪ್ಪನನ್ನು ನಾನು ಒಪ್ಪಿಸುತ್ತಿದ್ದೆ. ಈ ಹಾಳು ಸಿದ್ದ ನಮ್ಮ ಮನೆಗ್ಯಾಕೆ ಬಂದನೊ, ಎಲ್ಲಿಯವನೊ, ಯಾವ ಕುಲದವನೊ, ಅವನ ಹಿನ್ನೆಲೆಯೇನು ಒಂದೂ ಗೊತ್ತಿಲ್ಲ. ಒಳ್ಳೆ ಖದೀಮನಂತಿದ್ದಾನೆ. ಯಾವಾಗ ನಮ್ಮ ಮನೆಗೆ ದೋಖಾ ಮಾಡಿ ಓಡುವನೋ, ಈ ಅಪ್ಪಂಗತೂ ಅವನೇ ಇಂದ್ರ ಚಂದ್ರ. ಅಮ್ಮನೂ ಹಂಗೆ ಕುಣಿಯುತ್ತಾರೆ. ಅವನೇನು ನಮ್ಮ ನೆಂಟನೆ, ಬಂಧುವೇ, ಗೆಳೆಯನೇ ಆತ್ಮೀಯನೆ ಒಂದೂ ಅಲ್ಲ. ಆದರೂ ಅವನಿಗೆ ಈ ಮನೆಯಲ್ಲಿ ಸ್ಥಾನಮಾನ, ಥೂ ನನಗೆಂತ ಕರ್ಮನೂ. ಸಿಂಬಳದಲ್ಲಿ ಸಿಕ್ಕಿ ಬಿದ್ದ ನೊಣದಂತಹ ಪರಿಸ್ಥಿತಿ. ಅವನೋ, ಸಿಂಬಳದಂತೆ ಅಸಹ್ಯ. ತಾನು ಅದರಲ್ಲಿ ಬಿದ್ದ ನೊಣ. ತನ್ನ ಹೋಲಿಕೆಗೆ ತಾನೆ ಜುಗುಪ್ಸೆ ಪಟ್ಟುಕೊಂಡಳು.

ಬಣ್ಣ ಬಣ್ಣದ ಕನಸುಗಳು ಅರಳುವ ಕಾಲ ಇದು, ಅದನ್ನು ಅರಳಿಸುವಾತ ನಿಧಿಗೆ ಸಿಕ್ಕೇ ಬಿಟ್ಟಿದ್ದ. ಕಣ್ಣಿನಲ್ಲೇ ಸೆಳೆದು ಎದೆಯೊಳಗೆ ಪಾರಿವಾಳ ಹಾರಿಸಿ ಬಿಟ್ಟಿದ್ದ. ಕಲರವದ ಪಲುಕು, ಆಸೆಗಳ ತಳಕು, ರಂಗಿನ ಕನಸುಗಳ ಕನವರಿಕೆಯಲಿ ಜಡ್ಡಾದಳು ನಿಧಿ. ಅದೊಂದು ದಿನ ಜಡ್ಡಿಗೆ ಮದ್ದಾಗಿ ಬಂದೇ ಬಿಟ್ಟ. ಅದ್ಯಾವ ಗಳಿಗೆಯಲಿ ಅವನ ಸೆಳೆತದಲಿ ಬಿದ್ದು ಬಿಟ್ಟಳೊ ಅವಳಿಗೇ ತಿಳಿದಿರಲಿಲ್ಲ. ಪ್ರತಿ ದಿನ ಕಣ್ಣೋಟದಲಿ ಮಿಂದೆದ್ದಳು. ಕನಸುಗಳನ್ನು ಕದ್ದ ಹುಡುಗನ ನೆನೆಯುತ್ತಾ ಉಲ್ಲಾಸಭರಿತಳಾದಳು. ಹಾರಾಡುತ್ತಿದ್ದ ಎದೆಯನ್ನು ಮುಚ್ಚಿಟ್ಟುಕೊಳ್ಳುತ್ತಾ ನಾಚಿಕೆಯಲಿ ಕಂಪಿಸುತ್ತಾ ದಿನೆ ದಿನೇ ಕಳೆದೆ ಹೋದಳು. ಅದು ಯಾರಿಗೂ ಗೊತ್ತಾಗದಂತೆ ಇರಲು ಸಾಹಸ ಪಟ್ಟಳು. ಅದರೇನು ಗೊತ್ತಾಗದೆ ಇರುತ್ತದೆಯೇ, ಅಮ್ಮ ಸುಗುಣಳಂತೂ ಮಗಳ ಈ ವರ್ತನೆ ಕಂಡು ದಿಗಿಲಾಗಿದ್ದಳು. ಓದೋದು ತುಂಬಾ ಇರಬೇಕು. ಅದಕ್ಕೆ ಸೊರಗುತ್ತಿದ್ದಾಳೆ ಮಗಳು ಅಂತ ಭಾವಿಸಿಬಿಟ್ಟಳು.

ಆದರೂ ಎದೆಯಲ್ಲೇನೋ ಒಂದು ಸಣ್ಣ ತಳಮಳ, ಅದು ಎಂತದೊ ಅಂತ ತಿಳಿಯಲಾರದೆ ಒದ್ದಾಡಿದಳು. ಅವಳ ಒದ್ದಾಟವನ್ನು ಗಮನಿಸಿದ ರೇವಂತಪ್ಪ ಸಣ್ಣಗೆ ನಕ್ಕಿದ್ದರು. ಆದರೆ ಸಿದ್ದು ಅಷ್ಟು ಸುಲಭವಾಗಿ ಇದನ್ನು ತೆಗೆದುಕೊಳ್ಳಲಿಲ್ಲ. ಅವನ ಬದುಕಿನಲ್ಲೂ ಇಂತಹುದೇ ಒಂದು ಪಲುಕಿನಾಟ ಕಂಡಿದ್ದ. ತಳುಕಿನಾಟವನ್ನು ಅಲಕ್ಷಿಸಿದ್ದ. ಅದಕ್ಕೆ ಅವನು ಬಾರಿ ಬೆಲೆಯನ್ನೇ ತೆರಬೇಕಾದೀತು ಅಂತ ಅರಿಯದೇ ಹೋಗಿದ್ದ. ಆದರೆ ಈಗ ಅವನಿಗೆ ಎಲ್ಲವೂ ಅರ್ಥವಾಗುತ್ತಿತ್ತು. ಕಲರವದ ನಿನಾದ, ಅದರ ಪ್ರತಿಫಲನದ ಕಣ್ಣ ಮಿಂಚು ನಿಧಿಯಲ್ಲಿ ಕಂಡಿತ್ತು. ಅದೂ ಇತ್ತೀಚೆಗೆ ಆ ಮಿಂಚಿನ ಹೊಳಪು ಜಾಸ್ತಿಯಾಗಿದ್ದನ್ನು ಕಂಡಿದ್ದ. ಒಂದು ವಾರ ನಿಧಿಯನ್ನು ಹಿಂಬಾಲಿಸಿದ. ನಿಧಿ ಮನೆಯಿಂದ ಸ್ವಲ್ಪ ದೂರ ಹೊರಟ ಮೇಲೆ ಒಂದು ಕಾರು ಅಲ್ಲಿಗೆ ಬರುತ್ತಿತ್ತು. ಅದನ್ನು ನಿಧಿ ಹತ್ತಿಕೊಳ್ಳುತ್ತಿದ್ದಳು. ಕಾರು ಸೀದಾ ಅವಳ ಕಾಲೇಜಿನ ಸಮೀಪ ಅವಳನ್ನು ಬಿಟ್ಟು ಹೋಗುತ್ತಿತ್ತು. ಸಂಜೆ ಕೂಡಾ ಅದು ಪುನರಾವರ್ತನೆ ಆಗುತ್ತಿತ್ತು. ಇನ್ನವನು ತಡ ಮಾಡಬಾರದು ಅಂತ ನಿರ್ಧರಿಸಿದ. ಅದರ ಸುಳಿವನ್ನು ಕೊಂಚವೂ ಬಿಟ್ಟು ಕೊಡದೆ ತಾನೇ ಬಲೆ ಹೆಣೆದ. ಮಿಕ ಸುಲಭವಾಗಿ ಬಿದ್ದಿತು.

ಅವತ್ತು ಮನೆಯಲ್ಲಿ ಸ್ಪೆಷಲ್ ಕ್ಲಾಸ್ ಇದೆಯೆಂದು ನಿಧಿ ಹೊರಟಳು. ಅವಳ ಹಿಂದೆಯೇ ಗೊತ್ತಾಗದಂತೆ ಅವಳ ಸುಳಿವನ್ನು ಹಿಡಿದು ಸಿದ್ದು ಹೊರಟ. ಜೊತೆಗೆ ಸುಗುಣ ಮತ್ತು ರೇವಂತಪ್ಪನನ್ನು ಹೊರಡಿಸಿದ. ಕಾರಿನಲ್ಲಿಯೇ ಹೊರಟರು. ಎಲ್ಲಿಗೆ ಅಂತ ತಿಳಿಯದೆ ಹೋದರೂ ಒಂದೂ ಪ್ರಶ್ನಿಸದೆ ಅವನು ಹೇಳುವಲ್ಲಿ ಕಾರು ಚಲಾಯಿಸಿದ ರೇವಂತಪ್ಪ. ಕಾರನ್ನು ಒಂದು ಹೊಸ ಬಡಾವಣೆಯತ್ತ ಹೋಗಲು ತಿಳಿಸಿ, ಅಲ್ಲಿ ಒಂದು ಮನೆಯ ಮುಂದೆ ಕಾರನ್ನು ನಿಲ್ಲಿಸಲು ತಿಳಿಸಿ 'ನನ್ನ ಜೊತೆ ಬನ್ನಿ' ಅಂತ ಕರೆದೊಯ್ದ. ಬಾಗಿಲು ಹಾಕಿತ್ತು. ಮೆಲ್ಲನೆ ಬಾಗಿಲು ಬಡಿದ. ಅಲ್ಲಿನ ಕಿಟಕಿಯಲ್ಲಿ ಇಣುಕಿದ ಒಬ್ಬಾತ ಬಾಗಿಲು ತೆರೆದು ಒಳ ಬನ್ನಿ ಎಂದ. ಮೂವರೂ ಒಳ ಬಂದರು. ಅಲ್ಲಿದ್ದವರು 'ನಾವು ಸಿದ್ದವಾಗಿದ್ದೇವೆ, ನೀವು ಹಣ ತಂದಿದ್ದೀರಾ. ಇವರೇನಾ ಹಣ ಹಾಕೋರು' ಎಂದು ಸುಗುಣ ಮತ್ತು ರೇವಂತಪ್ಪರನ್ನು ನೋಡುತ್ತ ಕೇಳಿದ. ಅಲ್ಲಿ ತಮ್ಮ ಮಗಳು ನಿಧಿಯನ್ನು ನೋಡಿ ಆಶ್ಚರ್ಯ ಪಡುತ್ತಲೇ ಏನಿದೆಲ್ಲ ಎನ್ನುವಂತೆ ಸಿದ್ದುವಿನತ್ತ ನೋಡಿದರು. ಅಪ್ಪ ಅಮ್ಮ ಸಿದ್ದುವನ್ನು ಅಲ್ಲಿ ನೋಡಿ ಗೆಳತಿಯೊಂದಿಗೆ ಇದ್ದ ನಿಧಿ ಅದುರಿ ಬಿದ್ದಳು. ಕೈಯಲ್ಲಿದ್ದ ತಂಪು ಪಾನೀಯವನ್ನು ಹಾಗೆ ಕೆಳಗಿರಿಸಿ ಗರ ಬಡಿದವಳಂತೆ ನಿಂತು ಬಿಟ್ಟಳು. ಹತ್ತಿರ ಬಂದ ಸಿದ್ದು ಈ ಜ್ಯೂಸ್ ಕುಡಿದಿದ್ರಾ ಅವರನ್ನು ಕೇಳಿದಳು. ಇಲ್ಲವೆನ್ನುವಂತೆ ತಲೆಯಾಡಿಸಿದರು. ಅಷ್ಟರೊಳಗೆ ಒಳ ಬಂದ ಪೋಲಿಸಿನವರು 'ಹಣ ಬೇಕೇನೊ ಮಗನೇ, ಹಣ ಕೊಡ್ತೀವಿ ಬಾ' ಅಂತ ಅಲ್ಲಿದ್ದವರನ್ನೆಲ್ಲ ಒದ್ದು 'ಬ್ಲೂಫಿಲಂ ಮಾಡ್ತಿರಾ, ಅಮಾಯಕ ಹೆಣ್ಣು ಮಕ್ಕಳನ್ನು ಪ್ರೀತಿ ಪ್ರೇಮದ ಬಲೆ ಹಾಕಿ ಮೋಡಿ ಮಾಡಿ ಮತ್ತು ಬರುವ ಔಷಧಿಯನ್ನು ಜ್ಯೂಸಿಗೆ ಸೇರಿಸಿ, ಅವರನ್ನ ಕೆಟ್ಟ ಕೆಲಸಕ್ಕೆ ಬಳಸಿ ಕೊಳ್ತೀರಾ' ಅಂತ ಸಿಕ್ಕ ಸಿಕ್ಕಲ್ಲಿ ಬಡಿಯ ತೊಡಗಿದರು.

'ಈ ಜಾಲದ ಬಗ್ಗೆ ನಮ್ಗೆ ತುಂಬಾ ಮಾಹಿತಿ ಇತ್ತು. ನಾವು ಹುಡುಕ್ತನೇ ಇದ್ವಿ. ಈಗ ಸರಿಯಾದ ಸಾಕ್ಷಿ ಜೊತೆ ಸಿಕ್ಕಿಬಿದ್ದಿದ್ದೀರಾ. ನೀವು ಮಾಡಿರೊ ಎಲ್ಲಾ ಫ್ರಾಡ್‌ಗಳು ನಮಗೆ ಗೊತ್ತಿದೆ ನಡೆಯಿರಿ 'ಎಂದು ಅವರನ್ನೆಲ್ಲ ಎಳೆದುಕೊಂಡು ಹೊರಟರು. ಹೊರಡುವ ಮುನ್ನ ಸಿದ್ದುವಿನ ಕೈ ಕುಲುಕಿ 'ನಿಮ್ಗೆ ತುಂಬಾ ಧನ್ಯವಾದ. ನೀವು ಮಾಹಿತಿ ಕೊಟ್ಟಿದ್ದಕ್ಕೆ ಈ ಖದೀಮರನ್ನು ಹಿಡಿಯಲು ಸಾಧ್ಯವಾಗಿದ್ದು. ನಿಮ್ಮ ಸಹಕಾರ ಸದಾ ಇರಲಿ' ಅಂತ ಹೇಳಿ, ಹುಡುಗಿಯರತ್ತ ನೋಡಿ 'ಓದುವ ವಯಸ್ಸಿನಲ್ಲಿ ನಿಮ್ಗೆ ಹುಡುಗರ ಸಹವಾಸ ಬೇಕಾ, ಇನ್ನಾದರೂ ಜಾಗ್ರತೆಯಾಗಿರಿ. ಒಳ್ಳೆ ಸಮಯದಲ್ಲಿ ಪಾರಾಗಿದ್ದೀರಾ, ನಾಶವಾಗಿ ಬಿಡುತ್ತಿದ್ದೀರಿ' ಅಂತ ಗದರಿ ಹೊರಟರು.

ಇದ್ಯಾವುದೂ ಗೊತ್ತಿಲ್ಲದ ನಿಧಿ ಮತ್ತು ಅವಳ ಗೆಳತಿ ದಿಗ್ಭ್ರಾಂತಿಯಿಂದ ನಿಂತು ಬಿಟ್ಟಿದ್ದರು. ಅವರಿಗೆ ಎಲ್ಲವೂ ಅಯೋಮಯವೆನಿಸಿತ್ತು. ಅತೀವ ಕೋಪದಿಂದ ನಿಧಿಯ ಬಳಿ ಬಂದ ಸುಗುಣ ದರದರನೇ ಅವಳನ್ನು ಎಳೆದುಕೊಂಡು ಹೊರಗೆ ಬಂದು ಕಾರಿನ ಬಾಗಿಲು ತೆಗೆದು ಅವಳನ್ನು ಒಳಗೆ ತಳ್ಳಿದಳು. ಅವಳ ಗೆಳತಿ ಮಳ್ಳಿಯಂತೆ ನಿಧಿಯ ಹಿಂದೆ ಓಡಿ ಬಂದು ಕಾರಿನಲ್ಲಿ ಕುಳಿತಳು. ಸಿದ್ದು ರೇವಂತಪ್ಪ ಇಬ್ಬರೂ ತಲೆತಗ್ಗಿಸಿಕೊಂಡು ಕಾರಿನತ್ತ ಬಂದು ಕುಳಿತುಕೊಂಡರು. ರೇವಂತಪ್ಪ ಕಾರು ಓಡಿಸುವ ಸ್ಥಿತಿಯಲ್ಲಿ ಇರಲಿಲ್ಲ. ಸಿದ್ದು ನಾನೇ ಓಡಿಸ್ತಿನಿ ಅಂತ ತಾನೇ ಕಾರು ಚಲಾಯಿಸಿದ. ನಿಧಿಯ ಗೆಳತಿಯನ್ನು ಅವಳ ಮನೆ ಸಮೀಪ ಬಿಟ್ಟು ಸೀದಾ ಊರಿಗೆ ಬಂದರು. ಕಾರಿನಿಂದ ಇಳಿದ